# ಸಮಾಜಮುಖಿ ಆಗುವ ಆಶೆ

**ಅಪೇಕ್ಷಾ**

ಸ್ಟಾರ್ ಸುವರ್ಣದ 'ತ್ರಿವೇಣಿ ಸಂಗಮ'ದ ರಕ್ಷಾ


ಚಿತ್ರ: ಎಂ.ಎಸ್. ಮಂಜುನಾಥ್

★ *ಹೊಸ ಧಾರಾವಾಹಿಯ ಅನುಭವ ಹೇಗಿದೆ?*

ನನ್ನದು ಇಲ್ಲಿ ತುಂಬಾ ಪ್ರಭಾವಿ ಪಾತ್ರ. ಹಿರಿಯ ನಟರಾದ ರಾಜೇಶ್ ಮತ್ತು ಅನುಪ್ರಭಾಕರ್ ಅವರ ಜೊತೆ ನಟಿಸುತ್ತಿದ್ದೇನೆ ಎನ್ನುವುದೇ ದೊಡ್ಡ ಸಂಗತಿ. ಇತ್ತೀಚಿನ ದಿನಗಳಲ್ಲಿ ಏಕತಾನ ಕಥೆಗಳ ನಡುವೆ ಇದು ಬೇರೆಯದು ಅಂತ ಅನ್ನಿಸಿತು. ಕಥೆಯಲ್ಲಿ ರಕ್ಷಾಳಿಗೆ ಪ್ರಾಮುಖ್ಯತೆ ನೀಡಿರುವುದೂ ಖುಷಿ ಕೊಟ್ಟಿದೆ. ಬಾಗಲಕೋಟೆಯಿಂದ ನಾನು ಬೆಂಗಳೂರಿಗೆ ಓದಲು ಬಂದಿದ್ದು. ಆಕಸ್ಮಿಕವಾಗಿ ನಟನೆಯತ್ತ ವಾಲಿದೆ. ಇದು ನನಗೆ ಒಗ್ಗುವುದಿಲ್ಲ ಎಂದು ಸುಮ್ಮನಿದ್ದವಳಿಗೆ ಮತ್ತೆ ಮತ್ತೆ ಅವಕಾಶಗಳು ಬಂದು ಕಾಡತೊಡಗಿದವು. ಆಗ ನೋಡಿಯೇ ಬಿಡೋಣ ಎಂದು ಅಪ್ಪ ಮತ್ತು ಅಮ್ಮಗೆ ಒಪ್ಪಿಸಿ 'ಶ್ರೀಮತಿ ಭಾಗ್ಯಲಕ್ಷ್ಮಿ'ಗೆ ಬಣ್ಣ ಹಚ್ಚಿದೆ.

★ *ನಟನೆ ಹೇಗೆನಿಸುತ್ತದೆ?*

ನನ್ನ ಒಲವು 'ಫ್ಯಾಷನ್ ಡಿಸೈನ್'. ನನ್ನ ಪಾತ್ರಕ್ಕೆ ನಾನೇ ಈಗಲೂ ಮಾಡಿಕೊಳ್ಳುತ್ತೇನೆ. ನನ್ನ ಕೆಲವು ಗ್ರಾಹಕರಿಗೆ ಈಗಲೂ ಡಿಸೈನ್ ಮಾಡುತ್ತಿದ್ದೇನೆ. ಇದರ ಜೊತೆಗೆ ಡಾನ್ಸ್ ನನ್ನ ಹವ್ಯಾಸ.ಆದ್ದರಿಂದ ನಟನೆ ಕಷ್ಟ ಅನ್ನಿಸಲಿಲ್ಲ. ಹೇಳಿದ್ದನ್ನು ಮಾಡುವುದು ಅಭಿನಯ ಅಲ್ಲ ಎನ್ನುವುದು ಬೇರೆ ಬೇರೆ ಕಲಾವಿದರ ಸಂಪರ್ಕದಿಂದ ಮನದಟ್ಟಾಯಿತು. ಪಾತ್ರದಲ್ಲಿ ಬೆಸೆದುಕೊಳ್ಳಬೇಕು ಅನ್ನಿಸಿತು. ಪಾತ್ರಕ್ಕಾಗಿ ಕಲಿಯಬೇಕು. ಪೂರಕ ಪಾತ್ರಗಳ ಜೊತೆ ಬೆರೆಯಬೇಕು ಎನ್ನುವ ಅರಿವಾಯಿತು.

★ *ನಿಮಗಾದ ಅಚ್ಚರಿಯ ಸಂಗತಿ ಹೇಳುವುದಾದರೆ..*

ಇದು ನನ್ನ ಮೂರನೇ ಧಾರಾವಾಹಿ. ಎರಡು ಸಿನಿಮಾಗಳಲ್ಲಿ ನಟಿಸಿದ್ದೇನೆ. 'ಕಾಫಿ ತೋಟ' 'ಕಾಣದ ಕಡಲಿಗೆ'. ಕಾಫಿ ತೋಟವನ್ನು ಟಿ.ಎನ್.ಸೀತಾರಾಮ್ ನಿರ್ದೇಶಿಸಿದ್ದಾರೆ. ಅವರು ಆಡಿಷನ್‌ನಲ್ಲಿ ನನ್ನನ್ನು ಆಯ್ಕೆ ಮಾಡಿದಾಗ ಪುಟ್ಟ ಪಾತ್ರ ಎಂದೇ ಅಂದುಕೊಂಡಿದ್ದೆ. ಆದರೆ ಅವರು ಪ್ರಧಾನ ಪಾತ್ರವನ್ನು ಮಾಡುವಂತೆ ಮಾಡಿದರು. ಇದು ನಿಜಕ್ಕೂ ನನಗೆ ಸೋಜಿಗವನ್ನು ಉಂಟು ಮಾಡಿದ ಸಂಗತಿ.

★ *ಪೋಷಕರು ಈಗ ಏನೆನ್ನುತ್ತಾರೆ? ಮದುವೆ...*

ಅಪ್ಪ ಆನಂದ ಪುರೋಹಿತ್, ಅಮ್ಮ ಅನುಷಾ ಪುರೋಹಿತ್. ಅಪ್ಪ ಸಹಕಾರಿ ಬ್ಯಾಂಕ್ ಉದ್ಯೋಗಿ, ಅಮ್ಮ ಗೃಹಿಣಿ. ಅವರಿಗೆ ನಾನು ನಟಿಸುವುದು ಇಷ್ಟ ಇರಲಿಲ್ಲ. ಯಾವುತ್ತೂ ಪೋಷಕರ ಮಾತನ್ನು ಮೀರಿದ ಹುಡುಗಿಯೂ ನಾನಲ್ಲ. ಹಾಗಾಗಿ ಅವರ ಮಾತಿಗೆ ಒಪ್ಪಿ ಸುಮ್ಮನಾದೆ. ನಂತರ ಒಂದು ಬಾರಿ ನೋಡೋಣ ಎಂದು ಒಪ್ಪಿಸಿ ಕಾಲಿಟ್ಟೆ. ಇಲ್ಲೇ ನೆಲೆಯೂರುವ ಸಂದರ್ಭ ಬಂದಿದೆ. ಮದುವೆ ಆಗಬೇಕು. ಎಲ್ಲದಕ್ಕೂ ಕಾಲ ಕೂಡಿ ಬರಬೇಕು. ಸಕಾಲದಲ್ಲಿಯೇ ಎಲ್ಲಾ ಆಗುತ್ತದೆ.

★ *ನಟಿ ಆದ ಮೇಲೆ ಹೇಗಿದ್ದೀರಿ?*

ತಲೆ ತಿರುಗಿಲ್ಲ. ತೀರಾ ಸಾಧಾರಣವಾಗಿಯೇ ಇದ್ದೇನೆ. ವೃತ್ತಿ ಜೀವನವೇ ಬೇರೆ ಖಾಸಗಿ ಬದುಕೇ ಬೇರೆ. ನನಗೆ ಯಾವತ್ತೂ ನಾನು ಸೆಲೆಬ್ರಿಟಿ ಅಂತ ಅನ್ನಿಸಿಲ್ಲ. ಜನರ ಒಡನಾಟ ಕೂಡ ಸಹಜವಾಗಿಯೇ ಇದೆ. ವಿವಿಧ ಪಾತ್ರಗಳಲ್ಲಿ ನಟಿಸಬೇಕು. ಅದು ಜನ ಮೆಚ್ಚುವಂತೆ ಮಾಡಬೇಕು ಎನ್ನುವ ಆಶೆ ಇದೆ. ಬಿಟ್ಟರೆ ಮಹತ್ವಾಕಾಂಕ್ಷೆ ಏನೂ ಇಲ್ಲ.

★ *ಸಮಾಜಮುಖಿಯಾಗಿ ಹೇಗೆ ಯೋಚಿಸುತ್ತೀರಿ?*

ಆರ್ಥಿಕ ಸ್ವಾವಲಂಬನೆಯನ್ನು ಪ್ರೀತಿಸುತ್ತೇನೆ, ಗೌರವಿಸುತ್ತೇನೆ. ನಾನೂ ಅದನ್ನು ಸಾಧಿಸಿಕೊಂಡೇ ಬಂದವಳು. ಈ ನಿಟ್ಟಿನಲ್ಲಿ ನಾನು ಕಾಲೇಜುಗಳಲ್ಲಿ ಸಾಕಷ್ಟು ಮಾತಾಡಿದ್ದೇನೆ. ಅದು ನನ್ನ ಜವಾಬ್ದಾರಿ ಎಂದು ಭಾವಿಸಿದ್ದೇನೆ. ಸದ್ಯ ಅನಾಥಾಲಯ ಒಂದರಲ್ಲಿ ಪುಟ್ಟದಾಗಿ ತೊಡಗಿದ್ದೇನೆ. ಇನ್ನೂ ದೊಡ್ಡ ಮಟ್ಟದಲ್ಲಿ ಕೆಲಸ ಮಾಡಬೇಕು ಎನ್ನುವ ಕನಸಿದೆ.

■ ರಾಗು